# ಪ್ರಜಾವಾಣಿ




ಕೊಕ್ಕರೆಬೆಳ್ಳೂರಿನ ಪಕ್ಷಿ ಮಾಹಿತಿ ಕೇಂದ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿನಯ್ ಕುಮಾರ್ ಮಾತನಾಡಿದರು

# ‘ಪರಿಸರ ಸಂರಕ್ಷಣೆಯ ಕಾಳಜಿ ಅಗತ್ಯ’

ಭಾರತೀನಗರ: ಪ್ರಕೃತಿಯನ್ನು ಸುರಕ್ಷಿತವಾಗಿ ಕಾಪಾಡಬೇಕು ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ವಿನಯ್ ಕುಮಾರ್ ಸುವರ್ಣ ಹೇಳಿದರು.

ಸಮೀಪದ ಕೊಕ್ಕರೆಬೆಳ್ಳೂರಿನ ಪಕ್ಷಿ ಮಾಹಿತಿ ಕೇಂದ್ರದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಶನಿವಾರ ಆಯೋಜಿಸಿದ್ದ ಪರಿಸರ ಮಾಹಿತಿ, ಗಿಡ ನಾಟಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಹಲವು ಸ್ವ ಸಹಾಯ ಸಂಘಗಳ ಸದಸ್ಯರಿಗೆ ಲಾಭಾಂಶ ವಿತರಿಸಲಾಯಿತು. ಗ್ರಾಮ ಪಂಚಾಯತಿ ಅಧ್ಯಕ್ಷೆ ಜಯಲಕ್ಷ್ಮಮ್ಮ ಅಧ್ಯಕ್ಷತೆ ವಹಿಸಿದ್ದರು.

ತಾಲ್ಲೂಕು ಯೋಜನಾಧಿಕಾರಿ ಯೋಗೇಶ್ ಕನ್ನಾಡಿ, ಗ್ರಾ.ಪಂ ಸದಸ್ಯ ಕೆಂಪರಾಜು, ಮಾದನಾಯಕನಹಳ್ಳಿ ಲಿಂಗೇಗೌಡ, ಅರಣ್ಯ ಪಾಲಕ ಸುದರ್ಶನ್, ಹೆಜ್ಜಾರ್ಲೆ ಲಿಂಗೇಗೌಡ, ಸುಮುಖ ಸೇವಾ ಟ್ರಸ್ಟ್ ಮಹೇಶ್, ಕೃಷ್ಣಪ್ಪ, ವಲಯ ಮೇಲ್ವಿಚಾರಕ ಶಶಿಧರ್, ಸೇವಾ ಪ್ರತಿನಿಧಿ ನಾಗರತ್ನ ಇದ್ದರು.

Scanned with CamScanner